# ದ್ವೀಪಗಳಿಗಾಗಿ ಪ್ರಾರ್ಥಿಸಿರಿ



## ಉಚ್ಚರಿಸಿದ ಪ್ರವಾದನೆ

ನಾವು ದೇವರ ಮಾತಿಗಾಗಿ ಉಪವಾಸ ಮತ್ತು ಪ್ರಾರ್ಥನೆಯೊಂದಿಗೆ ಕಾಯುತ್ತಿದ್ದಾಗ, ಕರ್ತನು ನನ್ನ ಮೂಲಕ ನನ್ನೊಡನಿದ್ದವರ ಜೊತೆ ಮಾತನಾಡಿ: ದ್ವೀಪಗಳ ಮೇಲೆಯೂ ದ್ವೀಪಗಳಲ್ಲಿ ಬೇಜವಬ್ದಾರಿಯಿಂದ ವಾಸಿಸುವವಾರ ಮೇಲೆಯೂ ಇಗೋ, ವಿನಾಶವು ಬೇಗನೆ ಬರುತ್ತಿದೆ. ನೀರು ತನ್ನ ಸ್ಥಾನದಿಂದ ಸ್ವಾಭಾವಿಕವಾಗಿ ಹೆಚ್ಚುವುದರಿಂದಲೂ, ಅನಿಯಂತ್ರಣ ಬೆಂಕಿಯು ಹಾರಿಸಲ್ಪಡದೆ ಆವರಿಸಲ್ಪಡುವುದು, ಭೂಮಿಯ ಫಲಕಗಳು ತಮ್ಮ ಸ್ಥಳಗಳಿಂದ ಚಲಿಸುತ್ತವೆ, ಅವು ಪರಸ್ಪರ ಘರ್ಷಣೆಯಾಗಿ, ಏಕೆಂದರೆ ಮಂಜಿ ಹೆಪ್ಪುಗಟ್ಟಿದ ಹಾಳೆಗಳು ಕರಗಿ  ರಭಸದಿಂದ ಹರಿದು ಹೋಗುತ್ತವೆ. ದ್ವೀಪಗಳಲ್ಲಿ ದೊಡ್ಡ ಗಂಡಾಂತರ ಸಂಭವಿಸುತ್ತದೆ ಎಂದು ಕರ್ತನು ಹೇಳಿದ್ದಾನೆ. ಇಗೋ ನಾವು ಇದರ ವ್ಯಾಖ್ಯಾನ ಮತ್ತು ಸಂಪೂರ್ಣ ದೃಷ್ಟಿ ಪಡೆಯಲು ಕಾಯುತ್ತಿದ್ದೇವೆ: ಆಗ ಕರ್ತನು ಇದರ ಕಾರಣದಿಂದಾಗಿ, ವ್ಯಾಪಾರಿಗಳ ವ್ಯಾಪಾರೀಕರಣ ಮತ್ತು ನಾವಿಕರ ಮಾರ್ಗಗಳು ಬದಲಾಯಿಸಲಾಗುತ್ತದೆ. ದೊಡ್ಡ ಸಂಖ್ಯೆಯಲ್ಲಿ ಮೀನುಗಳು ಸಾಯುವುದರಿಂದ ಸಮುದ್ರದ ತೀರಗಳು ದುರ್ನಾತವಾಗುವುದು. ರಥಗಳಂತೆ ಸಮುದ್ರದ ಕೆಳಗೆ ಚಲಿಸುವ ನದಿಗಳ ಮಾರ್ಗಗಳು ಬದಲಾಗುವುದರಿಂದ, ಭೂಮಿಯ ಹವಾಮಾನ ಪರಿಸ್ಥಿತಿಗಳು ಕೋಪಗೊಳ್ಳುತ್ತವೆ. ಚಳಿಗಾಲವು ಹೆಪ್ಪುಗಟ್ಟುತ್ತದೆ, ಮಳೆಗಾಲವು ಪ್ರವಾಹವನ್ನು ಉಂಟುಮಾಡುತ್ತದೆ, ಉಷ್ಣವು ಕಾಡುಗಳನ್ನು ಹಿಡಿದುಕೊಳ್ಳುವಂತಾದಾಗುವುದು. ಕೆಲವು ದ್ವೀಪಗಳು ಸಂಪೂರ್ಣವಾಗಿ ಕಣ್ಮರೆಯಾಗುತ್ತವೆ. ಹೆಚ್ಚಾಗಿ ದ್ವೀಪಗಳನ್ನು ಹೊಂದಿರುವ ದೇಶಗಳು ಮತ್ತು ದ್ವೀಪಗಳನ್ನು ದೇಶಗಳನ್ನಾಗಿ ಹೊಂದಿರುವ ದೇಶಗಳನ್ನು ಗಮನಿಸುವಂತೆ ನಾವು ಎಚ್ಚರಿಕೆ ನೀಡಬೇಕು. ಇವು ಬೇಗನೆ ನಡೆಯುವುದೆಂದು ಕರ್ತನು ನುಡಿದನು. (ಬಹಿರಂಗಪಡಿಸಿದ ದಿನ: 19.12.2011)

ಕೆಲವು ವರ್ಷಗಳ ಹಿಂದೆ ಕರ್ತನು ಬಹಿರಂಗಪಡಿಸಿ ಮಾತನಾಡಿದ ಈ ಕಾರ್ಯವು ಮುಖ್ಯವಾಗಿ ದ್ವೀಪಗಳ ಬಗ್ಗೆ ಮಾತನಾಡಲ್ಪಡುತ್ತದೆ. ಈ ದ್ವೀಪಗಳು ಮುಖ್ಯವಾಗಿ ದ್ವೀಪಗಳನ್ನು ಒಳಗೊಂಡಿರುವ ದೇಶಗಳಾಗಿರಬಹುದು ಇಲ್ಲದಿದ್ದರೆ ಪ್ರತ್ಯೇಕ ದ್ವೀಪ ರಾಷ್ಟ್ರವೆಂದು ಹೇಳಲ್ಪಡುವ ದೇಶವಾಗಿರಬಹುದು. ಸಮುದ್ರಗಳಲ್ಲಿ ಸಹಜವಾಗಿ ವ್ಯಾಖ್ಯಾನಿಸಲು ಇನ್ನೂ ಬಳಸಲಾದ ಇತರ ದ್ವೀಪಗಳಾಗಿರಬಹುದು. ಇಂತಹ ದ್ವೀಪಗಳನ್ನು ಗುರಿಯಿಟ್ಟು ದೊಡ್ಡದಾದ ಹಾನಿಕಾರವು ಬೇಗನೆ ಬರುವುದಾಗಿ ಹೇಳಲಾಗುತ್ತದೆ. ಈ ಪ್ರವಾದನೆಯ ಮಾತುಗಳು ದ್ವೀಪಗಳ ಬಗ್ಗೆ ಮಾತನಾಡುವುದು ಮಾತ್ರವಲ್ಲ ಸಮುದ್ರದಲ್ಲಿ ಉಂಟಾಗುವ ಪರಿಣಾಮಗಳನ್ನು, ಭೂಮಿಯ ಮೇಲೆ ಸಂಭವಿಸುವ ಬದಲಾವಣೆಯ ಪರಿಣಾಮಗಳ ಬಗ್ಗೆ ಹೇಳಲ್ಪಟ್ಟಿದೆ. ಸಮುದ್ರದ ಆಳದಲ್ಲಿ ಓಡುವ ನೀರುಗಳಲ್ಲಿ ಬದಲಾವಣೆಗಳು ಎಲ್-ನಿನೊ ಮತ್ತು ಲಾ-ನಿನೊ ಎಂದು ಕರೆಯಲ್ಪಟ್ಟು ಭೂಮಿಯನ್ನು ಹವಾಮಾನ ಪರಿಸ್ಥಿತಿಗಳಲ್ಲಿ ತೀವ್ರವಾದ ಬದಲಾವಣೆ ಮಾಡುವ ಪ್ರಮುಖ ಕಾರಣವಾಗಿದೆ. ಈ ಒಂದು ಬದಲಾವಣೆಯಿಂದ ಭೂಮಿಯ ಪ್ರಾಂತ್ಯಗಳ ಮೇಲು, ತೀವ್ರವದ ಚಳಿ, ತೀವ್ರವದ ಪ್ರವಾಹಗಳು, ತೀವ್ರವದ ಶಾಖಗಳು ಮತ್ತು ಬರಗಳು ಕಾಣಿಸಿಕೊಳ್ಳುವುದು ಎಂದು ಕರ್ತನು ಎಚ್ಚರಿಸಿದ್ದಾನೆ. ಇವು ಕಟಲ್ಪಡುವಂತೆ ಪ್ರಾರ್ಥಿಸಿರಿ.

## ಪ್ರಾರ್ಥನೆಯ ಅರ್ಜಿಗಳು:

1. ಭೂಮಿಯ ಮೇಲಿರುವ ಎಲ್ಲ ದ್ವೀಪಗಳಿಗಾಗಿ ಪ್ರಾರ್ಥಿಸಿರಿ. ಮನುಷ್ಯರು ಜೀವಿಸುವ ದ್ವೀಪಗಳು ಮಾತ್ರವಲ್ಲ, ಮಾನವ ವಾಸಸ್ಥಾನಗಳಿಲ್ಲದ ದ್ವೀಪಗಳು ಮತ್ತು ಸಮುದ್ರಗಳ ಪರಿಸರ ವ್ಯವಸ್ಥೆಯನ್ನು ನಿರ್ವಹಿಸಲು ಅನಿವಾರ್ಯವಾಗಿರುವ ದ್ವೀಪಗಳು. ದ್ವೀಪಗಳ ಮೇಲೆ ಬರುವ ಹಾನಿಕಾರಗಳಿಂದ ಅವು ರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ.
2. ಮಾನವ ವಾಸಸ್ಥಾನಗಳಿಲ್ಲದ ದ್ವೀಪಗಳಲ್ಲಿ ಯಾವುದೇ ವಿನಾಶಗಳು ಸಂಭವಿಸಿದರೂ ಅವು ನಮಗೆ ಗೊತ್ತಾಗುವುದಿಲ್ಲ. ಇದೇ ಸಮಯದಲ್ಲಿ ದ್ವೀಪಗಳು ಸ್ವಭಾವತಃ ರಾಷ್ಟ್ರಗಳ ಮೇಲೆ ವಿನಾಶವಾಗಿದ್ದರೆ ಮಾನವಕುಲಕ್ಕೆ ಜೀವ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಆದ್ದರಿಂದ ಎಲ್ಲಾ ದ್ವೀಪಗಳು ಮತ್ತು ದ್ವೀಪದ ರಾಷ್ಟ್ರಗಳನ್ನು ನೆನಪಿಸಿ ಮತ್ತು ಅವುಗಳಿಗಾಗಿ ಪ್ರಾರ್ಥಿಸಿರಿ.
3. ನಮ್ಮ ನೆರೆಯ ದ್ವೀಪ ರಾಷ್ಟ್ರಗಳದ ಶ್ರೀಲಂಕಾ, ಮಾಲ್ಡೀವ್ಸ್ ಳಿಗಾಗಿಯೂ ಮತ್ತು ಭಾರತದ ದ್ವೀಪಗಳಾದ ಅಂಡಮಾನ್ ಮತ್ತು ನಿಕೋಬಾರ್ ಪ್ರದೇಶಗಳ ಸುರಕ್ಷತೆಗಾಗಿ ಪ್ರಾರ್ಥಿಸಿರಿ.
4. ಸಮುದ್ರದಲ್ಲಿ ನಡೆಯುವ ಬದಲಾವಣೆಗಳನ್ನು ಕರ್ತನು ಪ್ರತಿಬಂಧಿಸುವಂತೆ ಪ್ರಾರ್ಥಿಸಿರಿ. ಇವುಗಳಿಂದ ತೀವ್ರ ಬರಗಳು ಮತ್ತು ದೊಡ್ಡ ಪ್ರವಾಹಗಳ ಹಾನಿಕಾರವು ಉಂಟಾಗುವುದು.
5. ದ್ವೀಪಗಳಲ್ಲಿ ಉಂಟಾಗಲಿರುವ ಬೆಂಕಿಯ ನಾಶಗಳು, ಭೂಕಂಪಗಳನ್ನು ಕರ್ತನು ತಡೆಮಾಡುವಂತೆಯೂ, ಪ್ರಮುಖವಾಗಿ ಮನುಷ್ಯರು ಜೀವಿಸುವ ದ್ವೀಪಗಳಲ್ಲಿ ಇಂತಹ ವಿಕೋಪಗಳು ನಡೆಯದಂತೆ ಕರ್ತನು ತನ್ನ ಮಾತಿನಿಂದ ಅವುಗಳನ್ನು ಮುದ್ರಿಸುವಂತೆ ಪ್ರಾರ್ಥಿಸಿರಿ.